ದಿನಾಂಕಃ **27-01-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲು: ಆರೋಪಿ ಪರ ವಕೀಲರಾದ ಶ್ರೀ ಎಮ್.ಎ.ಎಚ್ ಅವರಿಂದ:**

1) ನಾನು ನನ್ನ ದೂರಿನ ಶಿರ್ಷಿಕೆಯಲ್ಲಿ ತಿಳಿಸಿದ ವಿಳಾಸದಲ್ಲಿ ಕಳೆದ 15 ವರ್ಷಗಳಿಂದ ವಾಸವಾಗಿರುತ್ತೇನೆ. ನಾನು ಅದಕ್ಕಿಂತ ಮೊದಲು ಗೋಕಾಕಿನ ಮಾಲದಾರ ಗಲ್ಲಿಯಲ್ಲಿ ವಾಸವಾಗಿದ್ದೆ. ಮಾಲದಾರ ಗಲ್ಲಿಯಲ್ಲಿರುವ ಮನೆಯನ್ನು ನಾವು ಮಾರಾಟ ಮಾಡಿದ್ದಕ್ಕಾಗಿ ಈಗ ಜಾಧವ ಪೆಟ್ರೋಲ್ ಪಂಪ್ ಫಾಲ್ಸ್ ರೋಡ್ ಗೋಕಾಕದಲ್ಲಿ ವಾಸವಾಗಿರುತ್ತೇನೆ. ನಾನು ಬಿ.ಸಿ.ಎ ಪದವಿಯನ್ನು ಜುಲೈ-2020 ರಲ್ಲಿ ಶೂನ್ಯ ಸಂಪಾಧನ ಮಠ ಗೋಕಾಕದಲ್ಲಿ ಪೂರ್ಣಗೊಳಿಸಿರುತ್ತೇನೆ. ಕಾಲೇಜಿನ ಸಮಯ ಬೆಳಗಿನ 9.30 ರಿಂದ ಮದ್ಯಾಹ್ನ 3.00 ರ ವರೆಗೆ ಇತ್ತು.

2) ನಾನು ಮಾಲದಾರ ಗಲ್ಲಿಯ ಎಸ್.ಎಸ್. ಆನಲೈನ್ ಸೆಂಟರ್ ನಲ್ಲಿ ಅರೇಕಾಲಿಕ ಕೆಲಸಗಾರನೆಂದು ಆಧಾರ ಕಾರ್ಡ, ಪಾಸ್ ಪೋರ್ಟ, ನೌಕರಿ ಅರ್ಜಿ ಹಾಕುವ ಕೆಲಸವನ್ನು ಮಾಡುತ್ತಿದ್ದೆ. ಸದರಿ ಆನಲೈನ್ ಸೆಂಟರಿನ ಮಾಲೀಕರ ಹೆಸರು ಸರ್ಪರಾಜ ಶಾಹಬಾಜಖಾನ

ಇತ್ತು. ಸದರಿ ಆನಲೈನ್ ಸೆಂಟರಿನಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರು ಅರೇಕಾಲಿಕ ಕೆಲಸಗಾರರು ಇರಲಿಲ್ಲ. ನನ್ನ ಕಾಲೇಜು ಮುಗಿದಾದ ನಂತರ ನಾನು ಆನಲೈನ್ ಸೆಂಟರಿಗೆ ಕೆಲಸ ಮಾಡಲು ಹೋಗುತ್ತಿದ್ದೆ. ನನಗೆ ಪ್ರತಿ ತಿಂಗಳು ರೂ.10,000/- ಸಂಬಳವನ್ನು ಆನಲೈನ್ ಸೆಂಟರಿನ ಮಾಲೀಕರು ನಗದಾಗಿ ನೀಡುತ್ತಿದ್ದರು.

3) ನಾನು ದೂರಿನಲ್ಲಿ ಎರಟೇಲ್ ಪೇಮೆಂಟ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಸಹ ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ಎರಟೇಲ್ ಪೇಮೆಂಟ್ ಬ್ಯಾಂಕು ಗೋಕಾಕಿನ ಗುರುವಾರ ಪೇಠಿನ ಅನಮೋಲ್ ಹೊಟೇಲ್ ಹತ್ತಿರ ಇರುತ್ತದೆ. ನಾನು ಸದರಿ ಎರಟೇಲ್ ಪೇಮೆಂಟ್ ಬ್ಯಾಂಕಿನಲ್ಲಿ ಬೆಳಗಾವಿ ಜಿಲ್ಲೆಯ ಟೀಮ್ ಲೀಡರ್ ಎಂದು ಕೆಲಸ ಮಾಡುತ್ತಿದ್ದೆ. ಟೀಮ್ ಲೀಡರ್ ಕೆಲಸ ಏನು ಎಂದರೆ ಎಲ್ಲಾ ತಾಲೂಕುಗಳ ಶಾಖೆಯ ಅಕೌಂಟ್ ಓಪನಿಂಗ್, ವಿಮೆ, ಸಾಲ ಕಟ್ಟಿಸಿಕೊಳ್ಳುವುದು, ಆರೋಗ್ಯ ವಿಮೆ, ವಾಹನ ವಿಮೆ ಮಾಡಿಸುವ ಕೆಲಸವಾಗಿರುತ್ತದೆ. ನಾನು ಕಛೇರಿಯಲ್ಲಿ ಕುಳಿತು ಮತ್ತು ಸ್ಥಳಕ್ಕೂ ಹೋಗಿ ಕೆಲಸಗಾರರಿಂದ ಕೆಲಸ ಮಾಡಿಸುತ್ತಿದ್ದೆ. ಸದರಿ ಕೆಲಸದ ಅವಧಿ ಬೆಳಿಗ್ಗೆ 9.30 ರಿಂದ ಸಾಯಂಕಾಲ 6.00 ಗಂಟೆಯವರೆಗೆ ಇತ್ತು. ನನಗೆ ಪ್ರತಿ ತಿಂಗಳು ಎರಟೇಲ್ ಪೇಮೆಂಟ್ ಬ್ಯಾಂಕಿನಿಂದ ರೂ.45,000/- ಸಂಬಳ ನೀಡುತ್ತಿದ್ದರು. ಸದರಿ ಸಂಬಳವನ್ನು ನನ್ನ ಎರಟೇಲ್ ಪೇಮೆಂಟ್ ಬ್ಯಾಂಕಿನ ಖಾತೆಗೆ ಜಮೆ ಮಾಡುತ್ತಿದ್ದರು.

4) ನಾನು 18.07.2020 ರಂದು ಎರಟೇಲ್ ಪೇಮೆಂಟ್ ಬ್ಯಾಂಕಿನಲ್ಲಿ ಟೀಮ್ ಲೀಡರ್ ಆಗಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ನಾನು ಪದವಿ ಮುಗಿದ 5-6 ತಿಂಗಳ ಒಳಗಾಗಿ ಎರಟೇಲ್ ಪೇಮೆಂಟ್ ಬ್ಯಾಂಕಿನ ಸಂದರ್ಶನಕ್ಕೆ ಹೋಗಿದ್ದೆ. ನಾನು ಈ ಪ್ರಕರಣದಲ್ಲಿ ಆನಲೈನ್ ಸೆಂಟರನಲ್ಲಿ ಕೆಲಸ ಮಾಡಿರುವ ಕುರಿತು ಮತ್ತು ಎರಟೇಲ್ ಪೇಮೆಂಟ್ ಬ್ಯಾಂಕಿನಲ್ಲಿ ಕೆಲಸ ಮಾಡಿರುವ ಕುರಿತು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ.

5) ನಾನು ಆಧಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ನಾನು ನನ್ನ ದೂರಿನಲ್ಲಿ ಆರೋಪಿಯ ಪರಿಚಯ ನನಗೆ 26 ವರ್ಷಗಳಿಂದಲೂ ಇರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಆರೋಪಿ ಬಯೋ ಡಿಜೈಲ್ ಸರಬರಾಜು ಮಾಡುವ ಕೆಲಸ ಮಾಡುತ್ತಾನೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಬಯೋ ಡಿಜೈಲ್ ಎಂದರೆ ಏನು ಎನ್ನುವ ಪ್ರಶ್ನೆಗೆ ಸಾಕ್ಷಿಯು ಬಯೋ ಡಿಜೈಲನ್ನು ಜನರೇಟರಗಳಿಗೆ ಕೈಗಾರಿಕಾ ಉದ್ಯಮದಲ್ಲಿ ಉಪಯೋಗ

ಮಾಡುತ್ತಿದ್ದು ಅಂತಹ ಕೈಗಾರಿಕೆ ಉದ್ಯಮದಲ್ಲಿ ಆರೋಪಿ ಬಯೋ ಡಿಜೈಲನ್ನು ಸರಬರಾಜು ಮಾಡುತ್ತಿದ್ದ. ಆರೋಪಿ ಬಯೋ ಡಿಜೈಲ್ ಸರಬರಾಜನ್ನು ಕಳೆದ 15 ವರ್ಷಗಳಿಂದ ಮಾಡುತ್ತಿರುವುದು ನನಗೆ ಗೊತ್ತಿರುತ್ತದೆ. ಅಂತಹ ಬಯೋ ಡಿಜೈಲನ್ನು ಆರೋಪಿ ಪ್ರತಿ ದಿನ ಎಷ್ಟು ಸರಬರಾಜು ಮಾಡುತ್ತಿದ್ದ ಎಂಬುವುದು ನನಗೆ ಗೊತ್ತಿಲ್ಲ. ಆರೋಪಿ ಬಯೋ ಡಿಜೈಲನ್ನು ಎಲ್ಲಿಂದ, ಹೇಗೆ ತರಿಸುತ್ತಿದ್ದ ಎಂಬುವುದು ನನಗೆ ಗೊತ್ತಿಲ್ಲ. ಆರೋಪಿಯ ಬಳಿ ಬಯೋ ಡಿಜೈಲನ್ನು ಸರಬರಾಜು ಮಾಡಲು ಪರವಾನಿಗೆ ಇರುವ ಕುರಿತು ನನಗೆ ಗೊತ್ತಿಲ್ಲ. ಬಯೋ ಡಿಜೈಲನ್ನು ಆರೋಪಿ ಎಲ್ಲಿ, ಹೇಗೆ ಶೇಖರಣೆ ಮಾಡುತ್ತಿದ್ದ ಎಂಬುವುದು ನನಗೆ ಗೊತ್ತಿಲ್ಲ.

6) ದೂರಿನಲ್ಲಿ ಜೂನ್-2021 ರಲ್ಲಿ ಆರೋಪಿ ನನಗೆ ರೂ.50,000/- ಹಣ ಕೇಳಿದ್ದ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಿಖರವಾಗಿ ಯಾವ ದಿನಾಂಕದಂದು ಆರೋಪಿ ರೂ.50,000/- ಸಾಲವನ್ನು ಕೇಳಿದ್ದ ಎಂದರೆ ಸಾಕ್ಷಿಯು ದಿ:10.06.2021 ರಂದು ರೂ.50,000/- ಕೇಳಿದ್ದ ಎಂದು ನುಡಿಯುತ್ತಾರೆ. ಸದರಿ ದಿನದಂದೆ ನಾನು ಆರೋಪಿಗೆ ರೂ.50,000/- ಹಣವನ್ನು ನೀಡಿದ್ದೆ. ಆರೋಪಿಗೆ ನಾನು ಹಣ ನೀಡುವಾಗ ಯಾವುದೇ ದಾಖಲೆಗಳನ್ನು ಬರೆಸಿಕೊಂಡಿರುವುದಿಲ್ಲ. ಏಕೆಂದರೆ ಆರೋಪಿ ನನ್ನ ಆತ್ಮೀಯ ಸ್ನೇಹಿತನಾಗಿದ್ದ ಮತ್ತು ಒಂದೇ ಕುಟುಂಬದಂತೆ ಇರುವುದರಿಂದ ಯಾವುದೇ ದಾಖಲೆಗಳನ್ನು ಬರೆಸಿಕೊಳ್ಳದೇ ಹಣ ನೀಡಿರುತ್ತೇನೆ.

7) ನಾನು ದೂರಿನ ಖಂಡಿಕೆ 3 ಆದ ನಂತರ ಉಪಖಂಡಿಕೆಯಲ್ಲಿ ಆರೋಪಿ ನನ್ನಿಂದ ಸುಮಾರು ರೂ.5,00,000/- ದಷ್ಟು ಹಣವನ್ನು ಬೇಡಿ ಪಡೆದುಕೊಂಡಿರುತ್ತಾನೆ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಆರೋಪಿ ಆಗಾಗ ನನ್ನಿಂದ ಹಣ ಪಡೆದುಕೊಳ್ಳುತ್ತಿದ್ದ ಅದು ರೂ.5,00,000/- ದವರೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ದಿ:10.06.2021 ರ ನಂತರ ಯಾವ ಯಾವ ದಿನಾಂಕದಂದು ಆರೋಪಿಗೆ ಎಷ್ಟೆಷ್ಟು ಹಣ ನೀಡಿರುತ್ತೀರಿ? ಎನ್ನುವ ಪ್ರಶ್ನೆಗೆ ಸಾಕ್ಷಿಯು ದಿನಾಂಕ ನೆನಪಿಲ್ಲ, ಆದರೆ ಆರೋಪಿ ನನ್ನಿಂದ ಆಗಾಗ ಹಣ ಪಡೆದುಕೊಳ್ಳುತ್ತಿದ್ದ ಮತ್ತು ಮರಳಿ ನೀಡುತ್ತಿದ್ದ ಎಂದು ನುಡಿಯುತ್ತಾರೆ. ಆರೋಪಿಗೆ ಚೆಕ್ಕಿನ ಮುಖಾಂತರವಾಗಲಿ, ಡಿ.ಡಿ ಮುಖಾಂತರವಾಗಲಿ ಅಥವಾ ಆರ್.ಟಿ.ಜಿ.ಎಸ್. ಮುಖಾಂತರ ವಾಗಲಿ ಹಣ ನೀಡಲು ನಿಮಗೆ ಏನಾದರೂ ತೊಂದರೆ ಇತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿಯು

ಆರೋಪಿ ಆಗಾಗ ನನ್ನ ಬಳಿ ಬಂದು ನನ್ನ ಬಳಿ ಇರುವ ರೂ.20,000/-, ರೂ.30,000/- ರೂ.40,000/- ಹಾಗೂ ರೂ.70,000/- ಗಳಂತೆ ಹಣ ಪಡೆದುಕೊಳ್ಳುತ್ತಿದ್ದ ಎಂದು ನುಡಿಯುತ್ತಾರೆ. ಆರೋಪಿಗೆ ಯಾವ ಯಾವ ದಿನಾಂಕದಂದು ಎಷ್ಟೆಷ್ಟು ಹಣ ನೀಡಿರುತ್ತೇನೆ ಎಂದು ದಾಖಲೆಯಲ್ಲಿ ಬರೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆರೋಪಿಯ ಮೇಲೆ ನನಗೆ ಅತೀವ ವಿಶ್ವಾಸವಿರುವುದರಿಂದ ದಿನಾಂಕ ಬರೆದುಕೊಳ್ಳದೇ ಹಣವನ್ನು ನೀಡುತ್ತಿದ್ದೆ ಎಂದು ನುಡಿಯುತ್ತಾರೆ.

8) ಆರೋಪಿ ಮೊದಲ ಭಾರಿಗೆ ನನ್ನಿಂದ ದಿ:10.06.2021 ರಂದು ರೂ.50,000/- ಪಡೆದುಕೊಂಡಾದ ನಂತರ ಪುನ: ಸಾಲ ಕೇಳಲು ಬಂದಾಗ ಮೊದಲಿನ ಹಣ ನೀಡು, ನಂತರ ಸಾಲದ ಹಣ ಕೊಡುತ್ತೇನೆ ಎಂದು ಹೇಳಲು ನಿಮಗೆ ಏನು ತೊಂದರೆ ಇರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆರೋಪಿ ನನ್ನಿಂದ ಪಡೆದ ಸಾಲದ ಹಣವನ್ನು ಆಗಾಗ ಮರಳಿ ಕೊಡುತ್ತಿದ್ದ ಮತ್ತು ಮತ್ತೆ ಸಾಲ ಪಡೆದುಕೊಳ್ಳುತ್ತಿದ್ದ ಎಂದು ನುಡಿಯುತ್ತಾರೆ.

9) ನೋಟಿಸಿನಲ್ಲಾಗಲಿ, ದೂರಿನಲ್ಲಾಗಲಿ ಮತ್ತು ನನ್ನ ಸ್ವ ಇಚ್ಛಾಹೇಳಿಕೆಯ ಬದಲಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಆರೋಪಿ ನನ್ನಿಂದ ಅಂದಾಜು ರೂ.5,00,000/- ವರೆಗೆ ಸಾಲ ಪಡೆದುಕೊಂಡಿರುತ್ತಾನೆ ಎಂದು ಮಾತ್ರ ಬರೆಸಿರುತ್ತೇನೆ ಎಂದೆರ ಸರಿಯಲ್ಲ. ನಿರ್ದಿಷ್ಟವಾಗಿ ಯಾವ ದಿನಾಂಕದಂದು ಎಷ್ಟೆಷ್ಟು ಹಣ ನೀಡಿರುತ್ತೇನೆಂದು ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ನಿಖರವಾಗಿ ದಿನಾಂಕ ಗೊತ್ತಿಲ್ಲದ ಕಾರಣ ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಕುಟುಂಬದ ಸದಸ್ಯರ ಸಮಕ್ಷಮ ಆರೋಪಿಗೆ ಹಣ ನೀಡಿರುತ್ತೇನೆಂದು ದೂರಿನಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಆರೋಪಿಯ ಕುಟುಂಬದ ಸದಸ್ಯರ ಹೆಸರು ಬರೆಸಿರುವುದಿಲ್ಲ ಎಂದರೆ ಸರಿ.

10) ನಾನು ಆನಲೈನ್ ಸೆಂಟರದಲ್ಲಿ ಕೆಲಸ ಮಾಡಿದ ಸಂಬಳದ ಹಣ ಮತ್ತು ಏರಟೇಲ್ ಪೆಮೆಂಟ್ ಬ್ಯಾಂಕಿನಲ್ಲಿ ಕೆಲಸ ಮಾಡಿದ ಸಂಬಳದ ಹಣದಲ್ಲಿ ಆರೋಪಿಗೆ ಹಣ ನೀಡಿರುತ್ತೇನೆ. ಸದರಿ ಸಂಗತಿಯನ್ನು ನಾನು ನನ್ನ ದೂರಿನಲ್ಲಿ, ನೋಟಿಸಿನಲ್ಲಿ ಮತ್ತು ಸ್ವ ಇಚ್ಛಾ ಹೇಳಿಕೆಯ ಬದಲಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ.

ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡುಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.